2016 ಕ.ತೀ.ವ 88

## ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಎ.ಎನ್. ವೇಣುಗೋಪಾಲ ಗೌಡ

ಭರತ್‌ರಾಜ್ ಗುಂಪೆ –ವಿರುದ್ಧ– ಕರ್ನಾಟಕ ಸರ್ಕಾರ, ಉಲ್ಲಾಳ ಪೊಲೀಸರ ಮೂಲಕ ಮತ್ತು ಇನ್ನೊಬ್ಬರು*

ದಂಡ ಪ್ರಕ್ರಿಯಾ ಸಂಹಿತೆ ಕಲಂ 482 ರಡಿಯಲ್ಲಿ ಕ್ರಿಮಿನಲ್ ಅರ್ಜಿ.

ಸೆಕ್ಷನ್ 366 ಮತ್ತು 34 ಐಪಿಸಿ.

ಅರ್ಜಿದಾರರು ಎರಡನೇ ಎದುರುದಾರರ ಮಗಳನ್ನು ಪ್ರೀತಿಸಿ ಮದುವೆಯಾಗಿ, ಈ ಬಗ್ಗೆ ಸ್ಥಳೀಯ ಪತ್ರಿಕೆಯಲ್ಲಿ ಪ್ರಕಟಣೆಯನ್ನು ನೀಡಿ ಮದುವೆಯಾದ ಬಗ್ಗೆ ಪೋಲೀಸ್ ಠಾಣೆ ಹಾಗೂ 2ನೇ ಎದುರುದಾರರಿಗೂ ತಿಳಿಸುತ್ತಾರೆ. ಎರಡನೇ ಎದುರುದಾರರ ಫಿರ್ಯಾದನ್ನಾಧರಿಸಿದ ಮೊದಲನೇ ಎದುರುದಾರರು ಭಾರತ ದಂಡ ಸಂಹಿತೆ ಕಲಂ 366ನ್ನು ಕಲಂ 34ರ ಜೊತೆಗೋದಿದಂತೆ ಆ ಕಲಂ ನಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನೆಸಗಿರುವರೆಂದು ಕ್ರಿಮಿನಲ್ ಮೊಕದ್ದಮೆಯನ್ನು ಅರ್ಜಿದಾರರ ವಿರುದ್ಧ ದಾಖಲಿಸಿಕೊಂಡು ನ್ಯಾಯಾಲಯಕ್ಕೆ ಸಲ್ಲಿಸಿದ ಪ್ರಥಮ ವರ್ತಮಾನ ಮಾಹಿತಿಯನ್ನು ರದ್ದುಗೊಳಿಸುವಂತೆ ಕೋರಿ ಸದರಿ ಕ್ರಿಮಿನಲ್ ಅರ್ಜಿ.

ಅರ್ಜಿದಾರರು ಮದುವೆಯಾದ ಪತ್ನಿಯು 19 ವರ್ಷದ ವಯಸ್ಕಳಾಗಿದ್ದು ಅವಳನ್ನು ಅವಳ ಇಚ್ಛೆಗೆ ವಿರುದ್ಧವಾಗಿ ಅಪಹರಿಸಿ ಅಥವಾ ಪುಸಲಾಯಿಸಿ ಮದುವೆಯಾಗಿಲ್ಲ. ಈ ಕಾರಣದಿಂದ ಅರ್ಜಿದಾರರು ಭಾರತ ದಂಡ ಸಂಹಿತೆ ಕಲಂ 366ರ ರಡಿಯ ಶಿಕ್ಷಾರ್ಹ ಅಪರಾಧವನ್ನು ಎಸಗಿಲ್ಲ. ಹೀಗಾಗಿ ಉಚ್ಚ ನ್ಯಾಯಾಲಯವು ಸದರಿ ಕ್ರಿಮಿನಲ್ ಅರ್ಜಿಯನ್ನು ಪುರಸ್ಕರಿಸಿ ಆದೇಶ ನೀಡಿದೆ.

*ಕ್ರಿಮಿನಲ್ ಅರ್ಜಿ ಸಂ. 7613/2014, ದಿನಾಂಕ: 28ನೇ ಏಪ್ರಿಲ್, 2015.

***ಉಲ್ಲೇಖಿಸಲಾದ ಮೊಕದ್ದಮೆಗಳು*** ***ಪ್ಯಾರಾಗಳಲ್ಲಿ***

1. *(2006)5 ಎಸ್‌ಸಿಸಿ 475*
   *ಲತಾ ಸಿಂಗ್ -ವಿರುದ್ಧ- ಉತ್ತರ ಪ್ರದೇಶ ಸರ್ಕಾರ*
   *ಮತ್ತು ಮತ್ತೊಬ್ಬರು* *(ಉಲ್ಲೇ) 14*
2. *(2010) 10 ಎಸ್‌ಸಿಸಿ 10*
   *ಫಾಜಲ್ ಗಫಾರ್ ಖಾನ್ ಮತ್ತು ಇತರರು*
   *-ವಿರುದ್ಧ- ಪಶ್ಚಿಮ ಬಂಗಾಳ ಸರ್ಕಾರ* *(ಉಲ್ಲೇ) 15*
3. *(2011)3 ಎಸ್‌ಸಿಸಿ 758*
   *ಅಶೋಕ್ ಕುಮಾರ್ ತೋಡಿ -ವಿರುದ್ಧ-*
   *ಕಿಶ್ವರ್ ಜಹಾನ್ ಮತ್ತು ಇತರರು* *(ಉಲ್ಲೇ) 16*
4. *(1992) ಎಸ್‌ಯುಪಿಪಿ (1) ಎಸ್‌ಸಿಸಿ 335*
   *ಹರಿಯಾಣ ಸರ್ಕಾರ -ವಿರುದ್ಧ- ಭಜನ್ ಲಾಲ್* *(ಉಲ್ಲೇ) 18*

ಅರ್ಜಿದಾರರ ಪರ: ಶ್ರೀ ಅರುಣ ಶ್ಯಾಮ್ ಎಂ., ವಕೀಲರು;
ಪ್ರತ್ಯರ್ಜಿದಾರರ ಪರ: ಶ್ರೀ ವಿಜಯ ಕುಮಾರ್ ಮಜಗೆ, ಹೆಚ್.ಸಿ.ಜಿ.ಪಿ.,
2ನೇ ಪ್ರತ್ಯರ್ಜಿದಾರರ ಪರ: ಶ್ರೀ ಬಿ. ಲೆಟಿಫ್, ವಕೀಲರು.

**ಆಜ್ಞೆ**

**ನ್ಯಾಯಮೂರ್ತಿ ಶ್ರೀ ಎ.ಎನ್. ವೇಣುಗೋಪಾಲ ಗೌಡ:**

ಅರ್ಜಿದಾರನು ನಿರ್ವಾಹಕನಾಗಿ ಕಾರ್ಯ ನಿರ್ವಹಿಸುತ್ತಿದ್ದು, ಸೈಂಟ್ ಆಗ್ನೆಸ್ ಕಾಲೇಜು, ಮಂಗಳೂರು ಇಲ್ಲಿ 1ನೇ ವರ್ಷದ ಬಿ.ಬಿ.ಎಂ. ತರಗತಿಯಲ್ಲಿ ವ್ಯಾಸಂಗ ಮಾಡುತ್ತಿದ್ದ ಸುಮಾರು 19 ವರ್ಷಗಳ ಅಂದರೆ 2ನೇ ಪ್ರತ್ಯರ್ಜಿದಾರನ ಪುತ್ರಿಯಾಗಿರುವ ಶ್ರೀಮತಿ ಇಂಷಾ ಖಲೀಲ್ ಈಕೆಯನ್ನು ಪ್ರೀತಿಸಿ, 19.11.2014ರಂದು ಶ್ರೀ ಸೀತಾರಾಮಾಂಜನೇಯ ಭಾರತಿ ಮಂದಿರ, ಯೆನ್ಮೂರ್ ಗ್ರಾಮ, ಸುಳ್ಯ,

ದಕ್ಷಿಣ ಕನ್ನಡ, ಇಲ್ಲಿನ ಸಭಾ ಭವನದಲ್ಲಿ ವಿವಾಹವಾಗಿರುತ್ತಾನೆ. ಆ ತರುವಾಯ, ಆ ದಂಪತಿಯು ತಮ್ಮ ವಿವಾಹದ ಅನುಷ್ಠಾಪನೆಗೆ ಸಂಬಂಧಿಸಿದಂತೆ 'ಜಯಕಿರಣ್' ಎಂಬ ಒಂದು ಸ್ಥಳೀಯ ಪತ್ರಿಕೆಯಲ್ಲಿ ವಿಷಯವನ್ನು ಪ್ರಕಟಿಸಿರುತ್ತಾರೆ. ಅರ್ಜಿದಾರನ ಪತ್ನಿಯು 2ನೇ ಪ್ರತ್ಯರ್ಜಿದಾರನಿಗೆ ಮತ್ತು ಅಧಿಕಾರ ವ್ಯಾಪ್ತಿಯಿರುವ ಪೋಲೀಸರಿಗೆ, ತನ್ನ ವಿವಾಹದ ಅನುಷ್ಠಾಪನೆಯ ಬಗ್ಗೆ ತಿಳಿಸಿರುತ್ತಾಳೆ.

2. 2ನೇ ಪ್ರತ್ಯರ್ಜಿದಾರರು ದೂರನ್ನು ನೀಡಿರುತ್ತಾರೆ. ಮೊದಲನೇ ಪ್ರತ್ಯರ್ಜಿದಾರ ಉಲ್ಲಾಳ ಪೋಲೀಸರು, ಅರ್ಜಿದಾರರು ಮತ್ತು ಇತರೆ ಮೂವರ ವಿರುದ್ಧ, ಭಾರತ ದಂಡ ಸಂಹಿತೆಯ 34ನೇ ಪ್ರಕರಣದ ಓದಿನೊಂದಿಗೆ 366ನೇ ಪ್ರಕರಣದಡಿಯಲ್ಲಿ ದಂಡನೀಯವಾದ ಅಪರಾಧಕ್ಕೆ ಸಂಬಂಧಿಸಿದಂತೆ ಅಪರಾಧ ಸಂಖ್ಯೆ 342/2014ರಲ್ಲಿ ಪ್ರಕರಣವನ್ನು ನೋಂದಾಯಿಸಿಕೊಂಡು, 3ನೇ ಜೆಎಂಎಫ್‌ಸಿ, ಮಂಗಳೂರು ದಕ್ಷಿಣ ಕನ್ನಡ ಇಲ್ಲಿಗೆ ಪ್ರಥಮ ಮಾಹಿತಿ ವರದಿಯನ್ನು ಸಲ್ಲಿಸಿರುತ್ತಾರೆ. ಸದರಿ ಪ್ರಕರಣಕ್ಕೆ ಸಂಬಂಧಿಸಿದ ಇಡೀ ವ್ಯವಹರಣೆಗಳನ್ನು ರದ್ದುಪಡಿಸಲು ಕ್ರಿಮಿನಲ್ ಪ್ರಕ್ರಿಯಾ ಸಂಹಿತೆಯ 482ನೇ ಪ್ರಕರಣದಡಿಯಲ್ಲಿ ಪ್ರಸ್ತುತ ಈ ಅರ್ಜಿಯನ್ನು ಸಲ್ಲಿಸಲಾಗಿರುತ್ತದೆ.

3. ಎರಡನೇ ಪ್ರತ್ಯರ್ಜಿದಾರನು, ಇಂಷಾ ಖಲೀಲಳನ್ನು ತಂದೊಪ್ಪಿಸಿ, ಆಕೆಯನ್ನು ಸ್ವತಂತ್ರಳಾಗಿ ಬಿಡಲು ಹೇಬಿಯಸ್ ಕಾರ್ಪಸ್ ರಿಟ್ ಅರ್ಜಿಯನ್ನು ನೀಡಬೇಕೆಂದು ರಾಜ್ಯ ಸರ್ಕಾರ, ಹಾಗೂ ಅಲ್ಲದೆ ಅರ್ಜಿದಾರರ ವಿರುದ್ಧ ಡಬ್ಲ್ಯುಪಿಹೆಚ್‌ಸಿ ಸಂಖ್ಯೆ 228/2014 ಸಲ್ಲಿಸಿರುತ್ತಾನೆ. ಅರ್ಜಿದಾರ ಮತ್ತು ಆತನ ಪತ್ನಿ ಶ್ರೀಮತಿ ಇಂಚರ ಉರುಫ್ ಇಂಷಾ 28.11.2014ರಂದು ಸ್ವತಃ ತಾವಾಗಿಯೇ ಹಾಜರಾಗಿರುವುದರಿಂದ, ಸದರಿ ಅರ್ಜಿಯನ್ನು ವಜಾಗೊಳಿಸಲಾಗಿರುತ್ತದೆ.

4. ಅರ್ಜಿದಾರರ ಪರ ಮಾನ್ಯ ವಕೀಲರಾದ, ಶ್ರೀ ಅರುಣ ಶ್ಯಾಮ್‌ರವರು, ಅರ್ಜಿದಾರನು ಯಾವುದೇ ಅಪರಾಧವನ್ನು ಎಸಗಿರುವುದಿಲ್ಲದಿರುವುದರಿಂದ ಮತ್ತು 2ನೇ ಪ್ರತ್ಯರ್ಜಿದಾರನು ಸಲ್ಲಿಸಿದ ದೂರಿನಲ್ಲಿ ಆಪಾದಿತ ಅಪರಾಧದ ಮುಖ್ಯಾಂಶಗಳನ್ನು ಹೇಳಿಲ್ಲದಿರುವುದರಿಂದ, ಪ್ರಕರಣದ ಪರಿಶೀಲನೆಯು ಕೇವಲ ಔಪಚಾರಿಕವಾಗಿರುತ್ತದೆ

ಅಥವಾ ನಿರರ್ಥಕವಾದುದಾಗಿರುತ್ತದೆ. ಇದರಿಂದ ಸಾರ್ವಜನಿಕರ ಸಮಯ ಮತ್ತು ಹಣ ಎರಡೂ ನಿರರ್ಥಕವಾಗಿದ್ದು, ಪ್ರಶ್ನಿತ ನಡಾವಳಿಯನ್ನು ರದ್ದುಗೊಳಿಸಬೇಕಾಗಿರುತ್ತದೆ. ಮಾನ್ಯ ವಕೀಲರ ಪ್ರಕಾರ, ದೂರಿನಲ್ಲಿ ಮಾಡಲಾಗಿರುವ ಆಪಾದನೆಗಳು, ಪ್ರಕರಣದ ನೋಂದಣಿ ಮತ್ತು ಅದರ ಮೇಲಿನ ತನಿಖೆಯನ್ನು ಸಮರ್ಥಿಸಿಕೊಳ್ಳುವ ಸಂಜ್ಞೇಯ ಅಪರಾಧಗಳನ್ನು ರೂಪಿಸುವುದಿಲ್ಲ. ಅರ್ಜಿದಾರನು ಇಂಷಾ ಖಲೀಲ್ ಉರೂಫ್ ಇಂಚರಳನ್ನು, ಆಕೆಯ ಸಮ್ಮತಿಯೊಂದಿಗೆ, ಗೆಳೆಯರ, ಹಿತೈಷಿಗಳ ಮತ್ತು ಕುಟುಂಬದ ಸದಸ್ಯರ ಸಮಕ್ಷಮದಲ್ಲಿ ವಿವಾಹವಾಗಿದ್ದು, ಅವರು ವೈವಾಹಿಕ ಜೀವನವನ್ನು ನಡೆಸುತ್ತಿರುತ್ತಾರೆಂದು ನಿವೇದಿಸಿಕೊಂಡಿರುತ್ತಾರೆ. ಅಲ್ಲದೆ, ಇವರು, ದೂರಿನಲ್ಲಿ ಮಾಡಿದ ಆಪಾದನೆಗಳನ್ನು ಸಮರ್ಥಿಸುವಂಥ ಸ್ವರೂಪದಲ್ಲಿ ಯಾವುದೇ ಆಧಾರಗಳಿಲ್ಲದಿರುವುದರಿಂದ, ಮೊದಲ ಪ್ರತ್ಯರ್ಜಿದಾರ ಸರ್ಕಾರವು, ಪ್ರಕರಣವನ್ನು ನೋಂದಣಿ ಮಾಡುವಲ್ಲಿ ಮತ್ತು ಮ್ಯಾಜಿಸ್ಟ್ರೇಟರಿಗೆ ಪ್ರಥಮ ಮಾಹಿತಿ ವರದಿಯನ್ನು ಸಲ್ಲಿಸುವಲ್ಲಿ ಸಂಪೂರ್ಣವಾಗಿ ಅಸಮರ್ಥವಾಗಿರುತ್ತದೆಂದೂ ಸಹ ನಿವೇದಿಸಿಕೊಂಡಿರುತ್ತಾರೆ. ಮುಂದುವರೆದು, ಇವರು, ಅರ್ಜಿದಾರನ ಪತ್ನಿಯು ಮೊದಲು ಬೇರೆ ಧರ್ಮಕ್ಕೆ ಸೇರಿದವಳಾಗಿದ್ದು, 2ನೇ ಪ್ರತ್ಯರ್ಜಿದಾರ ಮತ್ತು ಆತನ ಬೆಂಬಲಿಗರು ಹೆಚ್ಚಿನ ಪ್ರಭಾವಶಾಲಿಗಳೂ ಹಾಗೂ ರಾಜಕೀಯ ಪ್ರಭಾವವನ್ನೂ ಉಳ್ಳವರಾಗಿದ್ದು, ದಂಪತಿಗಳಿಗೆ ತೊಂದರೆ ಅಥವಾ ಕಿರುಕುಳಗಳನ್ನು ನೀಡುವ ಸಂಭಾವ್ಯತೆ ಇದ್ದು, ಜೀವಭಯವನ್ನು ಅರ್ಜಿದಾರನು ಎದುರಿಸುತ್ತಿರುತ್ತಾನೆಂದು ನಿವೇದಿಸಿಕೊಂಡಿರುತ್ತಾರೆ.

5. ಶ್ರೀ ವಿಜಯ್ ಕುಮಾರ್ ಮಜಗೆ, ಮಾನ್ಯ ಹೆಚ್‌ಸಿಜಿಪಿ, ಇವರು ಮೊದಲ ಪ್ರತ್ಯರ್ಜಿದಾರನು ಪ್ರಕರಣದ ತನಿಖೆ ನಡೆಸಿ, ಅಧಿಕಾರ ವ್ಯಾಪ್ತಿಯಿರುವ ಮ್ಯಾಜಿಸ್ಟ್ರೇಟರಿಗೆ ಅಂತಿಮ ವರದಿಯನ್ನು ಸಲ್ಲಿಸಿರುತ್ತಾನೆಂದು ನಿವೇದಿಸಿಕೊಂಡಿರುತ್ತಾರೆ. ಅರ್ಜಿಯು ಸಮಯ ಪೂರ್ವದ್ದಾಗಿರುವುದರಿಂದ, ವಜಾಗೊಳಿಸಲು ತಕ್ಕುದ್ದಾಗಿರುತ್ತದೆಂದು ನಿವೇದಿಸಿಕೊಂಡಿರುತ್ತಾರೆ.

6. ಮಾನ್ಯ ವಕೀಲರಾದ ಶ್ರೀಯುತ ಬಿ. ಲೆಥೀಫ್ ರವರು, 17.11.2014ರಂದು, ಶ್ರೀ ಇಂಷಾ ಖಲೀಲಾ ಕಾಲೇಜಿನಿಂದ ಮನೆಗೆ ಹಿಂತಿರುಗದೆ ಇದ್ದುದರಿಂದ, 2ನೇ

ಪ್ರತ್ಯರ್ಜಿದಾರರು ಅರ್ಜಿದಾರ ಮತ್ತು ಆತನ ಗೆಳೆಯರು ತಮ್ಮ ಮಗಳನ್ನು ಅಪಹರಿಸಿ, ವಿವಾಹಕ್ಕೆ ಒಪ್ಪಿಕೊಳ್ಳುವಂತೆ ಒತ್ತಾಯಿಸಿರುತ್ತಾರೆಂದು ಯೋಚಿಸಿ, 19.11.2014ರಂದು ದೂರನ್ನೂ ದಾಖಲಿಸಿರುತ್ತಾರೆ ಮತ್ತು ಅಪರಾಧ ಸಂಖ್ಯೆ 342/2014ರಲ್ಲಿನ ಪ್ರಕರಣವನ್ನು ಮೊದಲ ಪ್ರತ್ಯರ್ಜಿದಾರನಿಂದ ನೋಂದಾಯಿಸಲಾಗಿರುತ್ತದೆಂದು ನಿವೇದಿಸಿಕೊಂಡಿರುತ್ತಾರೆ. ಇವರು ಇಂಷಾ ಖಲೀಲ್‌ಗೆ ವಿವಾಹ ಮುಂತಾದವುಗಳಿಗೆ ಸಂಬಂಧಿಸಿದಂತೆ ಒತ್ತಾಯಪೂರ್ವಕವಾಗಿ ಆಕೆಯನ್ನು ವ್ಯವಹರಿಸಲಾಯಿತೆ ಅಥವಾ ಅಪಹರಣ ಮಾಡಲಾಯಿತೆ ಅಥವಾ ದುಷ್ಪ್ರೇರಣೆ ಮಾಡಲಾಯಿತೆ ಎಂಬುದನ್ನು ಕಂಡುಕೊಳ್ಳಲು ಪ್ರಕರಣದಲ್ಲಿ ಪೊಲೀಸರು ತನಿಖೆ ನಡೆಸುವುದು ಅಗತ್ಯವೆಂದು ನಿವೇದಿಸಿಕೊಂಡಿರುತ್ತಾರೆ.

7. ಅರ್ಜಿಯನ್ನು ಪರಿಶೀಲಿಸಿ, ವಾದ ವಿವಾದಗಳನ್ನು ಪರಿಗಣಿಸಲಾಗಿರುತ್ತದೆ. ಈಗ ಪರಿಶೀಲಿಸಬೇಕಾದ ಅಂಶವೆಂದರೆ, ***ಒಬ್ಬ ಮಹಿಳೆ ಅಂದರೆ ಇಂಷಾ ಖಲೀಲ್‌ಳನ್ನು ಅಪಹರಿಸಿ ಅವಳ ಇಚ್ಛೆಗೆ ವಿರುದ್ಧವಾಗಿ ಅಥವಾ ಭಾರತೀಯ ದಂಡ ಸಂಹಿತೆಯ 366ನೇ ಪ್ರಕರಣದಲ್ಲಿ*** ಕಂಡು ಬಂದ ಉದ್ದೇಶಗಳಿಗಾಗಿ ಆಕೆಗೆ ವಿವಾಹ ಮಾಡಿಕೊಳ್ಳಲು ಆಕೆಯನ್ನು ಒತ್ತಾಯಪಡಿಸಲಾಯಿತೆ ಎಂಬುದಾಗಿರುತ್ತದೆ.

8. ಈ ಮೊದಲಿನ ಪ್ಯಾರಾಗಳಲ್ಲಿ, ನಾನು ಈಗಾಗಲೇ ಅರ್ಜಿದಾರನ ವಿವಾಹದ ಅನುಷ್ಠಾಪನೆ ಕುರಿತಂತೆ ಮತ್ತು ಇಂಷಾ ಖಲೀಲ್‌ರ ಜನ್ಮ ದಿನಾಂಕವು ಆಕೆಯ ಎಸ್‌ಎಸ್‌ಎಲ್‌ಸಿ ಅಂಕಪಟ್ಟಿಯ ಅನುಸಾರ 03.10.1995 ಆಗಿರುತ್ತದೆಂಬುದನ್ನೂ ಕುರಿತಂತೆ ಸಹ ಕೆಲವು ವಾಸ್ತವಿಕ ವಿವರಗಳನ್ನು ಈಗಾಗಲೇ ಒತ್ತಿ ಹೇಳಿರುತ್ತೇನೆ. 13.11.2014ರಂದು ವಿವಾಹದ ಅನುಷ್ಠಾಪನೆ ಕುರಿತಂತೆ, "ಜಯ ಕಿರಣ" ಕನ್ನಡ ವಾರ್ತಾ ಪತ್ರಿಕೆಯಲ್ಲಿ ಪ್ರಕಟಿಸಲಾಗಿರುತ್ತದೆ. ಇಂಷಾ ಖಲೀಲ್ ಉರೂಫ್ ಇಂಚರ ಅರ್ಜಿದಾರನೊಂದಿಗಿನ ತನ್ನ ವಿವಾಹದ ಅನುಷ್ಠಾಪನೆ ಕುರಿತಂತೆ ಇಬ್ಬರೂ ಪ್ರತ್ಯರ್ಜಿದಾರರಿಗೂ ತಿಳಿಸಿರುತ್ತಾಳೆ.

9. 2ನೇ ಪ್ರತ್ಯರ್ಜಿದಾರನು ನೀಡಿದ ದೂರಿನ ಮೇಲೆ, ಅಪರಾಧ ಸಂಖ್ಯೆ 342/2014ರಲ್ಲಿ ಪ್ರಕರಣವನ್ನು ಮೊದಲನೆ ಪ್ರತ್ಯರ್ಜಿದಾರರು ದೂರನ್ನು

ನೋಂದಾಯಿಸಿಕೊಂಡಿರುತ್ತಾರೆ. 27.11.2014ರಂದು, ಹೇಬಿಯಸ್ ಕಾರ್ಪಸ್ ರಿಟ್ ನೀಡಲು ಮತ್ತು ಇಂಷಾ ಖಲೀಲ್‌ಳನ್ನು ಸ್ವತಂತ್ರವಾಗಿಡಲು ಪ್ರತ್ಯರ್ಜಿದಾರರಿಗೆ ನಿರ್ದೇಶಿಸುವಂತೆ ಕೋರಿ 2ನೇ ಪ್ರತ್ಯರ್ಜಿದಾರರು ಡಬ್ಲ್ಯುಪಿಹೆಚ್‌ಸಿ ಸಂಖ್ಯೆ 228/2014ನ್ನು ಸಲ್ಲಿಸಿರುತ್ತಾರೆ. ಸದರಿ ಅರ್ಜಿಯನ್ನು, ತಪ್ಪು ಗ್ರಹಿಕೆಯಿಂದಾಗಿ 28.11.2014ರಂದು ವಜಾಗೊಳಿಸಲಾಗಿರುತ್ತದೆ.

10. ಅರ್ಜಿದಾರರು ಮತ್ತು 2ನೇ ಪ್ರತ್ಯರ್ಜಿದಾರರು ಎರಡು ಭಿನ್ನ ಭಿನ್ನ ಧರ್ಮಗಳಿಗೆ ಸೇರಿದವರಾಗಿರುತ್ತಾರೆ. ಇಂಷಾ ಖಲೀಲ ಉರುಫ್ ಇಂಚರ, ತನ್ನ ವಿವಾಹದ ಅನುಷ್ಠಾಪನೆಯನ್ನು ತಿಳಿಸಿದ್ದರಿಂದ 2ನೇ ಪ್ರತ್ಯರ್ಜಿದಾರರು ಅವರಿಗೆ ಕಿರುಕುಳ ನೀಡಬಹುದು ಮತ್ತು / ಅಥವಾ ನಡಾವಳಿಯನ್ನು ಆರಂಭಿಸಬಹುದೆಂದು ಶಂಕಿಸಿ, ಇಬ್ಬರೂ ಪ್ರತ್ಯರ್ಜಿದಾರರನ್ನು ಅರ್ಜಿದಾರರಿಗೆ ತೊಂದರೆ ಉಂಟು ಮಾಡಬಾರದು ಅಥವಾ ಹಾನಿಯುಂಟು ಮಾಡಬಾರದು ಹಾಗೂ ಅವರನ್ನು ಸಂತೋಷವಾಗಿ ಜೀವನ ಸಾಗಿಸಲು ಬಿಟ್ಟುಬಿಡಬೇಕೆಂದು ಕೋರಲಾಗಿರುತ್ತದೆ.

11. ಮಾನ್ಯ ವಕೀಲರುಗಳು ಸಲ್ಲಿಸಿದ ದಾಖಲೆ ಮತ್ತು ನಿವೇದನೆಗಳನ್ನು ಪರಿಶೀಲಿಸಿದ ಮೇಲೆ, 2ನೇ ಪ್ರತ್ಯರ್ಜಿದಾರರ ಮಗಳಾದ ಇಂಷಾ ಖಲೀಲ್ ವಯಸ್ಕಳೆಂದೂ, ಅವಳು ವಿವಾಹ ಮಾಡಿಕೊಂಡ ಸಮಯದಲ್ಲೂ ವಯಸ್ಕಳಾಗಿದ್ದಳೆಂಬುದು ತಿಳಿದುಬರುತ್ತದೆ. ಹಾಗಾಗಿ, ಹಾಗೆ ಇಷ್ಟಪಟ್ಟವರನ್ನು ವಿವಾಹವಾಗಲು ಅಥವಾ ಆಕೆ ಇಷ್ಟಪಟ್ಟವರೊಡನೆ ಬದುಕಲು ಸ್ವತಂತ್ರಳಾಗಿರುತ್ತಾಳೆ. ಅಂತರ್ಜಾತಿ ಅಥವಾ ಅಂತರ್ ಸಮುದಾಯ ಅಥವಾ ಅಂತರ್ ಧರ್ಮಗಳೆಂಬ ಯಾವ ನಿಷಿದ್ಧಗಳೂ ಇರುವುದಿಲ್ಲ. ಹಾಗಾಗಿ, ಪ್ರಶ್ನಿತ ಪ್ರಥಮ ಮಾಹಿತಿ ವರದಿಯಲ್ಲಿ ಹೆಸರಿಸಿರುವಂಥ ಅರ್ಜಿದಾರ ಮತ್ತು ಆತನ ಗೆಳೆಯರು ಯಾವುದೇ ಅಪರಾಧವನ್ನು ಮಾಡಿರುವುದಿಲ್ಲ.

12. ಭಾರತೀಯ ದಂಡ ಸಂಹಿತೆಯ 366ನೇ ಪ್ರಕರಣದಡಿಯಲ್ಲಿ ಅಪರಾಧವನ್ನು ಸಾಬೀತುಪಡಿಸಲು, ಆಪಾದಿತನು, ಒಬ್ಬ ಮಹಿಳೆಯನ್ನು ಆಕೆಯ ಇಚ್ಛೆಗೆ ವಿರುದ್ಧವಾಗಿ,

ಯಾರೇ ವ್ಯಕ್ತಿಯನ್ನು ಮದುವೆಯಾಗುವಂತೆ ಅವಳನ್ನು ಒತ್ತಾಯಪಡಿಸುವ ಉದ್ದೇಶದಿಂದ ಅಥವಾ ಅವಳನ್ನು ಒತ್ತಾಯಪಡಿಸುವ ಸಂಭವವಿದೆಯೆಂದು ತಿಳಿದೂ ಅಥವಾ ವಿಧಿ ನಿಷಿದ್ಧ ಸಂಭೋಗಕ್ಕೆ ಅವಳನ್ನು ಬಲಾತ್ಕರಿಸಬಹುದೆಂದು ಅಥವಾ ದುರ್ಮಾರ್ಗಕ್ಕೆ ಪ್ರೇರೇಪಿಸಬಹುದೆಂದು ಅಥವಾ ವಿಧಿನಿಷಿದ್ಧ ಸಂಭೋಗಕ್ಕೆ ಅವಳನ್ನು ಬಲಾತ್ಕರಿಸಬಹುದೆಂದು ಅಥವಾ ದುರ್ಮಾರ್ಗಕ್ಕೆ ಪ್ರೇರೇಪಿಸಬಹುದೆಂದು, ಅಥವಾ ವಿಧಿನಿಷಿದ್ಧ ಸಂಭೋಗಕ್ಕೆ ಅವಳನ್ನು ಬಲಾತ್ಕರಿಸುವ ಅಥವಾ ದುರ್ಮಾರ್ಗಕ್ಕೆ ಪ್ರೇರೇಪಿಸುವ ಸಂಭವವಿರುವುದೆಂದು ತಿಳಿದೂ ವ್ಯಪಹರಿಸುವ ಅಥವಾ ಅಪಹರಿಸಲು ಯಾವುದೇ ಸ್ಥಳದಿಂದ ಹೊರಡಿಸಲು ಪ್ರೇರೇಪಿಸಿರುವುದು ಮತ್ತು ಠಕ್ಕ ಉಪಾಯಗಳಿಂದ ಅಂಥ ಪ್ರೇರೇಪಣೆ ಮಾಡಿರುವುದನ್ನು, ಸಾಬೀತು ಪಡಿಸಬೇಕಾಗಿರುತ್ತದೆ. ಭಾರತೀಯ ದಂಡ ಸಂಹಿತೆಯ 366ನೇ ಪ್ರಕರಣದಡಿಯಲ್ಲಿ ಆಪಾದಿತನ ವಿರುದ್ಧ ಮುಂದುವರೆಯಲು, ಯಾರೇ ಮಹಿಳೆಯನ್ನು ಬೇರೊಬ್ಬ ವ್ಯಕ್ತಿಯೊಂದಿಗೆ ಅವಳು ವಿಧಿ ನಿಷಿದ್ಧ ಸಂಭೋಗ ನಡೆಸಲು ಅವಳನ್ನು ಬಲಾತ್ಕರಿಸಬಹುದೆಂಬ ಅಥವಾ ದುರ್ಮಾರ್ಗಕ್ಕೆ ಪ್ರೇರೇಪಿಸಬಹುದೆಂಬ ಉದ್ದೇಶದಿಂದ ಅಥವಾ ಹಾಗೆ ಬಲಾತ್ಕರಿಸುವ ಅಥವಾ ದುರ್ಮಾರ್ಗಕ್ಕೆ ಪ್ರೇರೇಪಿಸುವ ಸಂಭವವಿರುವುದೆಂದು ತಿಳಿದೂ, ಆ ಮಹಿಳೆಯನ್ನು ಯಾವುದೇ ಸ್ಥಳದಿಂದ ಹೊರಡಲು ಪ್ರೇರೇಪಿಸಿರುತ್ತಾನೆಂದು ಆಪಾದಿಸಬೇಕಾಗುತ್ತದೆ. ಭಾರತ ದಂಡ ಸಂಹಿತೆಯ 366ನೇ ಪ್ರಕರಣದಲ್ಲಿ ನಮೂದಿಸಿರುವ ಉದ್ದೇಶಗಳಿಗಾಗಿ ವ್ಯಪಹರಣ ಮಾಡಲಾಗಿದೆಯೆಂಬ ಆಪಾದನೆಗಳನ್ನು ಪಿರ್ಯಾದು ಒಳಗೊಂಡಿರದ ಹೊರತು, ಭಾರತ ದಂಡ ಸಂಹಿತೆಯ 366ನೇ ಪ್ರಕರಣದಡಿಯಲ್ಲಿ ಪ್ರಕರಣವನ್ನು ನೋಂದಾಯಿಸಿಕೊಳ್ಳಲಾಗುವುದಿಲ್ಲ.

13. ಪ್ರಸ್ತುತ ಪ್ರಕರಣವು ಭಾರತ ದಂಡ ಸಂಹಿತೆಯ 366ನೇ ಪ್ರಕರಣದಡಿಯಲ್ಲಿನ ಅಪರಾಧಕ್ಕೆ ಸಂಬಂಧಿಸಿದಂತೆ 1ನೇ ಪ್ರತ್ಯರ್ಜಿದಾರರು ಪ್ರಕರಣವನ್ನು ಯಾಂತ್ರಿಕವಾಗಿ ನೋಂದಣಿ ಮಾಡಿಕೊಂಡಿರುತ್ತಾರೆಂಬುದಕ್ಕೆ ಇದು ಒಂದು ಜ್ವಲಂತ ಉದಾಹರಣೆಯಾಗಿರುತ್ತದೆ. ಎರಡನೇ ಪ್ರತ್ಯರ್ಜಿದಾರನ ಮಗಳು ಅನ್ಯ ಧರ್ಮೀಯನನ್ನು ಮದುವೆಯಾದ ಕಾರಣ, ಆತನಿಗೆ ಕಿರಿಕಿರಿ ಯುಂಟಾಗಿದ್ದು, ಆತನ ಸಂದರ್ಭದಲ್ಲಿ,

ಮೊದಲ ಪ್ರತ್ಯರ್ಜಿದಾರನ ಪ್ರಶ್ನಿತ ಕ್ರಮವು, ಕಾನೂನು ಪ್ರಕ್ರಿಯೆಯನ್ನು ದುರುಪಯೋಗಪಡಿಸಿಕೊಂಡತಾಗಿರುತ್ತದೆ.

14. ***ಲತಾ ಸಿಂಗ್ –ವಿರುದ್ಧ– ಉತ್ತರ ಪ್ರದೇಶ ಸರ್ಕಾರ ಮತ್ತು ಮತ್ತೊಬ್ಬರು***[1], ಪ್ರಕರಣದಲ್ಲಿ ಅದರಲ್ಲಿನ ಅರ್ಜಿದಾರಳು, ಬೇರೆ ಜಾತಿಗೆ ಸೇರಿದ ಹುಡುಗನನ್ನು ಮದುವೆಯಾಗಿ ಆತನೊಂದಿಗೆ ಜೀವನವನ್ನು ಆರಂಭಿಸಿರುತ್ತಾಳೆ. ಆಕೆಯ ಸಹೋದರ ಭಾರತ ದಂಡ ಸಂಹಿತೆಯ 366 ಮತ್ತು 368ನೇ ಪ್ರಕರಣಗಳಡಿಯಲ್ಲಿ ಆತ ಅಪರಾಧ ಎಸಗಿರುತ್ತಾನೆಂದು ಆಪಾದಿಸಿ ತನ್ನ ಸಹೋದರಿಯ ಪತಿಯ ಮೇಲೆ ಕ್ರಿಮಿನಲ್ ದೂರನ್ನು ಸಲ್ಲಿಸಿರುತ್ತಾನೆ. ಅದರ ಮೂಲಕವೇ ಅಧಿವಿಚಾರಣಾ ವ್ಯವಹರಣೆಗಳನ್ನು ಆರಂಭಿಸಲಾಗಿರುತ್ತದೆ. ಸರ್ವೋಚ್ಚ ನ್ಯಾಯಾಲಯದಲ್ಲಿ ಸಲ್ಲಿಸಲಾಗಿರುವ ರಿಟ್ ಅರ್ಜಿಯನ್ನು, ಗಮನಿಸಿದಾಗ, ಅಲ್ಲಿ ಇಬ್ಬರು ವಯಸ್ಕ ಭಿನ್ನ ಲಿಂಗಿಗಳು ಪರಸ್ಪರ ಸಮ್ಮತಿಯೊಂದಿಗೆ ಜೊತೆಯಲ್ಲಿದ್ದರೆ ಅದು ಯಾವುದೇ ಅಪರಾಧವಾಗುವುದಿಲ್ಲ. ಇದನ್ನು ಅನೈತಿಕ ಎಂದು ಭಾವಿಸಿದ್ದಾಗ್ಯೂ, ವಯಸ್ಕ ಹೆಣ್ಣು "ತಾನು ಬಯಸಿದ ಯಾರನ್ನಾದರೂ ಮದುವೆಯಾಗಬಹುದು" ಅಥವಾ "ತಾನು ಬಯಸಿದಂಥ ಯಾರೊಂದಿಗಾದರೂ ಇರಬಹುದು" ಎಂದು ಅಭಿಪ್ರಾಯ ಪಡಲಾಗಿರುತ್ತದೆ. ಪ್ರಕರಣದ ವಾಸ್ತವಿಕ ಹಿನ್ನಲೆಯಲ್ಲಿ, ಯಾರೇ ಆಪಾದಿತನು ಯಾವುದೇ ಅಪರಾಧವನ್ನು ಎಸಗಿರುವುದಿಲ್ಲವೆಂದು ಮತ್ತು ಪ್ರಶ್ನಿತ ಕ್ರಿಮಿನಲ್ ಪ್ರಕರಣವು ನ್ಯಾಯಾಲಯದ ನಡಾವಳಿಯ ದುರುಪಯೋಗವಾಗಿರುತ್ತದೆಂದು ಅಭಿಪ್ರಾಯಪಡಲಾಗಿರುತ್ತದೆ. ಆ ಪ್ರಕರಣದಲ್ಲಿ ನೀಡಿರುವ ಅಭಿಪ್ರಾಯಗಳು ಹಾಗೂ ಅದರಲ್ಲಿ ನೀಡಿರುವ ನಿರ್ದೇಶನಗಳು, ಪ್ರಸ್ತುತ ಪ್ರಕರಣಕ್ಕೆ ಸೂಕ್ತವಾದವುಗಳಾಗಿದ್ದು, ಈ ಮುಂದೆ ಅವುಗಳನ್ನು ಉದ್ಧರಿಸಲಾಗಿರುತ್ತದೆ:

> "14. ಈ ಪ್ರಕರಣವು ಸಂಬಂಧಗಳ ಆಘಾತಕಾರಿ ಅಂಶವನ್ನು ಬಹಿರಂಗಪಡಿಸುತ್ತದೆ. ಅರ್ಜಿದಾರಳು ವಯಸ್ಕಳಾಗಿರುತ್ತಾಳೆ ಮತ್ತು ಘಟನೆ ನಡೆದ ಸಮಯದಲ್ಲೂ ವಯಸ್ಕಳಾಗಿದ್ದಳು ಎಂಬುದರಲ್ಲಿ ಯಾವುದೇ ವಿವಾದವಿರುವುದಿಲ್ಲ.

2. (2006)5 ಎಸ್‌ಸಿಸಿ 475

ಹಾಗಾಗಿ, ಈಕೆ, ತಾನು ಇಚ್ಛಿಸುವಂಥ ಯಾರನ್ನಾದರೂ ಮದುವೆಯಾಗಲು ಅಥವಾ ತಾನು ಇಚ್ಛಿಸುವಂಥ ಯಾರೊಂದಿಗಾದರೂ ಜೀವನ ನಡೆಸಲು ಮುಕ್ತಳಾಗಿರುತ್ತಾಳೆ. ಹಿಂದೂ ವಿವಾಹ ಅಧಿನಿಯಮ ಅಥವಾ ಯಾವುದೇ ಇತರ ಕಾನೂನಿನಡಿಯಲ್ಲಿ ಅಂತರ್ಜಾತಿ ವಿವಾಹ ಮಾಡಿಕೊಳ್ಳಲು ಯಾವುದೇ ನಿಷೇಧವಿರುವುದಿಲ್ಲ. ಹಾಗಾಗಿ, ಅರ್ಜಿದಾರಳು, ಆಕೆಯ ಪತಿ ಅಥವಾ ಪತಿಯ ಸಂಬಂಧಿಕರು ಯಾವ ಅಪರಾಧವನ್ನು ಎಸಗಿದ್ದಾರೆಂಬುದು ನಮಗೆ ಕಾಣುತ್ತಿಲ್ಲ.

15. ಯಾರೇ ಆಪಾದಿತರು ಯಾವುದೇ ಅಪರಾಧವನ್ನು ಎಸಗಿರುವುದಿಲ್ಲ ಮತ್ತು ಅರ್ಜಿದಾರಳು ಬೇರೆ ಜಾತಿಯ ಹುಡುಗನನ್ನು ಮದುವೆಯಾಗಿರುವ ಕಾರಣಕ್ಕೆ ಕೋಪೋದ್ರಿಕ್ತರಾಗಿರುವಂಥ ಅರ್ಜಿದಾರರ ಸಹೋದರರು ಪ್ರಶ್ನಿತ ಕ್ರಿಮಿನಲ್ ಪ್ರಕರಣವು ನ್ಯಾಯಾಲಯ ಪ್ರಕ್ರಿಯೆಯ ಆಡಳಿತ ಯಂತ್ರದ ದುರುಪಯೋಗ ಮಾಡಿಕೊಂಡಿರುತ್ತಾರೆಂಬುದು ನಮ್ಮ ಅಭಿಪ್ರಾಯವಾಗಿರುತ್ತದೆ. ಅರ್ಜಿದಾರಳ ಸಹೋದರರ ಕಾನೂನುಬಾಹಿರ ಮತ್ತು ಅನುಚಿತ ವರ್ತನೆಗಳ (ಇದರ ವಿವರಗಳನ್ನು ಮೇಲೆ ವಿವರಿಸಲಾಗಿರುತ್ತದೆ) –ವಿರುದ್ಧ– ಕ್ರಮ ತೆಗೆದುಕೊಳ್ಳುವುದಕ್ಕೆ ಬದಲಾಗಿ, ಪೊಲೀಸರು ಅರ್ಜಿದಾರಳ ಪತಿ ಮತ್ತು ಆತನ ಸಂಬಂಧಿಕರ ವಿರುದ್ಧ ಕ್ರಮ ತೆಗೆದುಕೊಂಡಿರುತ್ತಾರೆಂದು ಬರೆಯಲು ನಮಗೆ ಸಂಕಟವಾಗುತ್ತಿದೆ.

16. ಹೀಗೆ ಬೇರೆ ಬೇರೆ ಜಾತಿಯಲ್ಲಿ ಮದುವೆಯಾದ ಕಿರಿಯ ಪುರುಷ ಮತ್ತು ಮಹಿಳೆಯರ ವಿರುದ್ಧ ಕಿರುಕುಳ, ಬೆದರಿಕೆ ಮತ್ತು ಹಿಂಸೆ ನೀಡುತ್ತಿರುವುದು ಇಂಥ ಹಲವಾರು ಸಂದರ್ಭಗಳಲ್ಲಿ ನಮ್ಮ ಗಮನಕ್ಕೆ ಬರುತ್ತಿದ್ದು, ವಿಷಯವನ್ನು

ಕುರಿತಂತೆ ಕೆಲವು ಸಾರ್ವತ್ರಿಕ ಅಭಿಪ್ರಾಯವನ್ನು ನೀಡುವುದು ಅವಶ್ಯಕವಾಗಿರುತ್ತದೆಂದು ನಾವು ಬಯಸುತ್ತೇವೆ. ನಮ್ಮ ದೇಶವು, ನಮ್ಮ ಇತಿಹಾಸದಲ್ಲಿ ನಿರ್ಣಾಯಕವಾದ ಸಂಕ್ರಮಣ ಕಾಲಘಟ್ಟವನ್ನು ಹಾದು ಹೋಗುತ್ತಿದೆ, ಈ ನ್ಯಾಯಾಲಯವು ಹೆಚ್ಚಿನ ಸಾರ್ವಜನಿಕ ಹಿತಾಸಕ್ತಿಯನ್ನು ಹೊಂದಿರುವಂಥ, ಇಂತಹ ಸಂದರ್ಭಗಳಲ್ಲಿ ಮೌನವಾಗಿ ಉಳಿಯಲು ಸಾಧ್ಯವಿರುವುದಿಲ್ಲ.

17. ಜಾತಿ ಪದ್ಧತಿಯು ನಮ್ಮ ದೇಶದ ಒಂದು ಶಾಪವಾಗಿದ್ದು, ಇದರಿಂದ ಸಾಧ್ಯವಾದಷ್ಟು ಬೇಗ ಹೊರಬರಬೇಕಾಗಿದೆ. ವಾಸ್ತವವಾಗಿ, ನಾವೆಲ್ಲಾ ಯಾವಾಗ, ಒಗ್ಗಟ್ಟಾಗಿ ರಾಷ್ಟ್ರದ ಮುಂದಿರುವ ಸಮಸ್ಯೆಗಳನ್ನು ಒಟ್ಟಾಗಿ ಎದುರಿಸಬೇಕಾಗಿರುವುದೋ, ಆ ಸಮಯದಲ್ಲಿಯೇ ಇದು ರಾಷ್ಟ್ರವನ್ನು ವಿಭಜಿಸುತ್ತಿದೆ. ಹಾಗಾಗಿ, ವಾಸ್ತವವಾಗಿ ಅಂತರ್ಜಾತಿ ವಿವಾಹಗಳು ಜಾತಿ ವ್ಯವಸ್ಥೆಯನ್ನು ನಿರ್ಮೂಲನ ಮಾಡಲು ನಿರ್ಣಾಯಕವಾದ ಪಾತ್ರವನ್ನು ವಹಿಸುತ್ತವೆ. ಆದಾಗ್ಯೂ, ಅಂತರ್ಜಾತಿ ವಿವಾಹ ಮಾಡಿಕೊಳ್ಳುತ್ತಿರುವ ಕಿರಿಯ ಪುರುಷ ಮತ್ತು ಮಹಿಳೆಯರಿಗೆ ಹಿಂಸಾತ್ಮಕ ಬೆದರಿಕೆಗಳಿವೆ ಹಾಗೂ ಅವರಿಗೆ ಭಯಾನಕವಾಗಿ ಹಿಂಸಿಸಲಾಗುತ್ತಿರುವ ವಿಷಯಗಳು ರಾಷ್ಟ್ರದ ಹಲವಾರು ಕಡೆಗಳಿಂದ ಕೇಳಿ ಬರುತ್ತಿರುವುದು ಆತಂಕಕಾರಿ ವಿಚಾರವಾಗಿರುತ್ತದೆ. ನಮ್ಮ ಅಭಿಪ್ರಾಯದಲ್ಲಿ, ಅಂಥ ಹಿಂಸಾತ್ಮಕ ಕೃತ್ಯಗಳು ಅಥವಾ ಬೆದರಿಕೆಗಳು ಅಥವಾ ಕಿರುಕುಳಗಳು ಸಂಪೂರ್ಣವಾಗಿ ಕಾನೂನು ಬಾಹಿರವಾಗಿದ್ದು, ಇಂಥ ಕೃತ್ಯ ಎಸಗಿದವರನ್ನು ನಿರ್ದಾಕ್ಷಿಣ್ಯವಾಗಿ ದಂಡಿಸಬೇಕಾಗುತ್ತದೆ. ಇದು ಮುಕ್ತ ಮತ್ತು ಪ್ರಜಾಪ್ರಭುತ್ವ ರಾಷ್ಟ್ರವಾಗಿದ್ದು, ಒಮ್ಮೆ ಒಬ್ಬ ವ್ಯಕ್ತಿ ವಯಸ್ಕನಾದ ತರುವಾಯ, ಆತ/ಆಕೆ, ತಾನು ಬಯಸಿದಂಥ ವ್ಯಕ್ತಿಯನ್ನು ವಿವಾಹವಾಗಬಹುದಾಗಿರುತ್ತದೆ. ಅಂಥ ಹುಡುಗ

> ಅಥವಾ ಹುಡುಗಿಯ ತಂದೆ ತಾಯಿಯರು, ಅಂಥ ಅಂತರ್ಜಾತಿ ಅಥವಾ ಅಂತರ್ ಧರ್ಮೀಯ ವಿವಾಹವನ್ನು ಒಪ್ಪಿಕೊಳ್ಳದಿದ್ದಲ್ಲಿ, ತಮ್ಮ ಮಗ ಅಥವಾ ಮಗಳ ಸಂಬಂಧವನ್ನು ಕಡಿದುಕೊಳ್ಳಬಹುದೇ ಹೊರತು ಅಂತರ್ಜಾತಿ ಅಥವಾ ಅಂತರ್ ಧರ್ಮ ವಿವಾಹಗಳನ್ನು ಮಾಡಿಕೊಂಡಂಥ ವ್ಯಕ್ತಿಗೆ ಬೆದರಿಕೆಗಳನ್ನು ಅಥವಾ ಹಿಂಸಾತ್ಮಕ ಕೃತ್ಯಗಳನ್ನು ಎಸಗಬಾರದು ಮತ್ತು ಕಿರುಕುಳಗಳನ್ನು ನೀಡಬಾರದಾಗಿರುತ್ತದೆ. ಆದ್ದರಿಂದ, ನಾವು, ರಾಷ್ಟ್ರದಾದ್ಯಂತ ಆಡಳಿತಾತ್ಮಕ/ಪೊಲೀಸ್ ಅಧಿಕಾರಿಗಳಿಗೆ ಯಾರೇ ಹುಡುಗ ಅಥವಾ ಹುಡುಗಿಯರು ವಯಸ್ಕರಾಗಿದ್ದು, ತಮ್ಮ ಇಚ್ಛೆಗನುಸಾರವಾಗಿ ಅಂತರ್ಜಾತಿ ಅಥವಾ ಅಂತರ್ ಧರ್ಮೀಯ ವಿವಾಹ ಮಾಡಿಕೊಂಡಿರುವಂಥ ದಂಪತಿಗಳಿಗೆ ಕಿರುಕುಳ ನೀಡಿ, ಬೆದರಿಕೆಯೊಡ್ಡುವ ಅಥವಾ ಹಿಂಸಾತ್ಮಕ ಕೃತ್ಯಗಳನ್ನು ಎಸಗುವ ಅಂಥ ವ್ಯಕ್ತಿಗಳ ವಿರುದ್ಧ ಪೊಲೀಸರು ಕ್ರಿಮಿನಲ್ ನಡಾವಳಿಗಳನ್ನು ಕೈಗೆತ್ತಿಕೊಳ್ಳುವಂತೆ ಮತ್ತು ಕಾನೂನಿಗನುಸಾರವಾಗಿ ಅಂಥ ವ್ಯಕ್ತಿಗಳ ವಿರುದ್ಧ ಕ್ರಮ ಕೈಗೊಳ್ಳುವಂತೆ ನಾವು ಸೂಚನೆಗಳನ್ನು ನೀಡಿರುತ್ತೇವೆ".
>
> (ಇದಕ್ಕೆ ನಮ್ಮಿಂದ ಒತ್ತು ನೀಡಲಾಗಿದೆ)

15. ***ಫಾಜಲ್ ಗಫಾರ್ ಖಾನ್ ಮತ್ತು ಇತರರು –ವಿರುದ್ಧ– ಪಶ್ಚಿಮ ಬಂಗಾಳ ಸರ್ಕಾರ***[1], ಪ್ರಕರಣದಲ್ಲಿ, ಅದರಲ್ಲಿನ ಅಪೀಲುದಾರನು, ಅಪ್ರಾಪ್ತ ಹುಡುಗಿಯನ್ನು ಅಪಹರಿಸಿರುತ್ತಾನೆಂಬ ಆಪಾದನೆಯ ಮೇಲೆ ಭಾರತ ದಂಡ ಸಂಹಿತೆ 366ನೇ ಪ್ರಕರಣದಡಿಯಲ್ಲಿನ ಆರೋಪದ ಮೇಲೆ ಕ್ರಿಮಿನಲ್ ನಡಾವಳಿಯನ್ನು ಎದುರಿಸುತ್ತಿದ್ದು, ಕ್ರಿಮಿನಲ್ ಪ್ರಕ್ರಿಯಾ ಸಂಹಿತೆಯ 482ನೇ ಪ್ರಕರಣದಡಿಯಲ್ಲಿ ಅರ್ಜಿಯನ್ನು ಮುಂದುವರಿಸಿ, ಉಚ್ಚ ನ್ಯಾಯಾಲಯದಲ್ಲಿ ಪರಿಹಾರವನ್ನು ಪಡೆಯದೆ, ಸರ್ವೋಚ್ಚ ನ್ಯಾಯಾಲಯದ ಎದುರು ಅಪೀಲನ್ನು ಸಲ್ಲಿಸಿರುತ್ತಾನೆ. ತಾನು ಅಪೀಲುದಾರ

1. (2010) 10 ಎಸ್‌ಸಿಸಿ 10

ಆಪಾದಿತನನ್ನು ಮದುವೆಯಾಗಿರುತ್ತೇನೆಂದು ಹೇಳಿರುವ ಹೇಳಿಕೆಯಿರುವ ಅಫಿಡಾವಿಟ್ಟನ್ನು ಸಲ್ಲಿಸಲಾಗಿರುತ್ತದೆ. ಆ ಹುಡುಗಿಯ ಸದರಿ ಅಫಿಡಾವಿಟ್ಟಿನ ಹಿನ್ನೆಲೆಯಲ್ಲಿ, ಆಕೆ ಮತ್ತು ಅಪೀಲುದಾರನ ನಡುವೆ ಆಗಿರುವ ಮದುವೆಯನ್ನು ಒಪ್ಪಿಕೊಂಡು, ಅಪೀಲುದಾರನ ಪರ ಮಾನ್ಯ ನ್ಯಾಯವಾದಿಗಳಾದ ಮಾನ್ಯ ವಕೀಲರು, ಇವರಿಗೆ ಒಂದು ಮಗು ಕೂಡ ಜನಿಸಿದ್ದು, ನ್ಯಾಯದ ಹಿತಾಸಕ್ತಿಯಿಂದ ಅಪೀಲನ್ನು ಅಂಗೀಕರಿಸಿ, ಕ್ರಿಮಿನಲ್ ನಡಾವಳಿಗಳನ್ನು ರದ್ದುಪಡಿಸಲಾಗಿದೆಯೆಂಬ ಹೇಳಿಕೆಯನ್ನು ರೂಪಿಸಿರುತ್ತಾರೆ.

16. ***ಅಶೋಕ್ ಕುಮಾರ್ ತೋಡಿ –ವಿರುದ್ಧ– ಕಿಶ್ವರ್ ಜಹಾನ್ ಮತ್ತು ಇತರರು***[4], ಪ್ರಕರಣದಲ್ಲಿ, ಒಬ್ಬ ಹುಡುಗ, ಒಂದು ಹುಡುಗಿಯನ್ನು ಪ್ರೀತಿಸಿ, ವಿಶೇಷ ವಿವಾಹ ಅಧಿನಿಯಮ, 1954 ರಡಿಯಲ್ಲಿ, ವಿವಾಹ ನೋಂದಣಿ ಕಚೇರಿಯಲ್ಲಿ ಮದುವೆಯಾಗಿರುತ್ತಾನೆ. ತರುವಾಯ ಆ ಹುಡುಗಿಯು ತನ್ನ ತಂದೆಯ ಮನೆಯನ್ನು ಬಿಟ್ಟು, ಆಕೆ ತನ್ನ ಪತಿಯ ಮನೆಯಲ್ಲಿ ಇರಲು ಆರಂಭಿಸುತ್ತಾಳೆ. ತರುವಾಯ ತಮ್ಮ ಮದುವೆಯ ಬಗ್ಗೆ ಪೋಲೀಸು ಪ್ರಾಧಿಕಾರಿಗಳಿಗೆ ತಮ್ಮ ಮದುವೆಯ ಬಗ್ಗೆ ಮಾಹಿತಿ ನೀಡಿರುತ್ತಾರೆ. ಅಲ್ಲದೆ ಆ ಹುಡುಗಿ ತನ್ನ ಮದುವೆಯನ್ನು ಕುರಿತಂತೆ ತನ್ನ ತಂದೆಗೆ ಮಾಹಿತಿ ನೀಡಿ, ತಾನು ತನ್ನ ಪತಿಯೊಂದಿಗೆ, ಆಕೆಯ ಅತ್ತೆ – ಮಾವಂದಿರ ಮನೆಯಲ್ಲಿಯೇ ಇರುತ್ತಾಳೆ. ತರುವಾಯ ಆಕೆಯ ತಂದೆ ಮತ್ತು ಅವರ ಸಂಬಂಧಿಕರು, ಆ ಮದುವೆ ಮನೆಗೆ ಹೋಗಿ, ಆ ಹುಡುಗಿಯನ್ನು ಹಿಂದಕ್ಕೆ ಕಳುಹಿಸುವಂತೆ ಆ ಮನೆಯವರ ಮನವೊಲಿಸಲು ಪ್ರಯತ್ನಿಸಿರುತ್ತಾರೆ. ಮಾತುಗಳು ಮುಂದುವರೆದು, ಕೋರಿಕೆಯು ಫಿರ್ಯಾದಿನ ರೂಪಕ್ಕೆ ತಿರುಗಿರುತ್ತದೆ. ಇದರ ಪರಿಣಾಮವಾಗಿ, ಇಬ್ಬರು ಪೋಲೀಸ್ ಅಧಿಕಾರಿಗಳು, ಆಪಾದಿತನ ಮನೆಗೆ ತೆರಳಿ ಆತನಿಗೆ ಮಾನಸಿಕವಾಗಿ ಒತ್ತಡವನ್ನು ಸೃಷ್ಟಿಸುತ್ತಾರೆ. ಆ ದಂಪತಿಗಳ ಮಧ್ಯೆ ಯಾವುದೇ ಪಾತ್ರವಿರದಂಥ ಪೋಲೀಸರು ಕಾನೂನನ್ನು ಜಾರಿಗೊಳಿಸುವ ಪ್ರಾಧಿಕಾರಿಯಾಗಿದ್ದು, ಅವರ ವೈವಾಹಿಕ ಜೀವನದಲ್ಲಿ ಮಧ್ಯೆ ಪ್ರವೇಶಿಸಲು

4. (2011)3 ಎಸ್‌ಸಿಸಿ 758

ಯಾವುದೇ ಹಕ್ಕನ್ನು ಹೊಂದಿರುವುದಿಲ್ಲ. ವಾಸ್ತವವಾಗಿ, ಅವರ ವೈವಾಹಿಕ ಜೀವನದಲ್ಲಿ ಮಧ್ಯೆ ಪ್ರವೇಶಿಸುವಂಥ ಇತರರನ್ನು ತಪ್ಪಿಸಬೇಕಾಗಿರುವುದು ಅವರ ಕರ್ತವ್ಯವಾಗಿರುತ್ತದೆ. ಆದರೆ ಅವರು ಕ್ರಿಮಿನಲ್ ಪ್ರಕರಣವನ್ನು ನೋಂದಾಯಿಸಿ, ಸದರಿ ವ್ಯಕ್ತಿಗಳ ವೈವಾಹಿಕ ಜೀವನದಲ್ಲಿ ಮಧ್ಯೆ ಪ್ರವೇಶಿಸುವ ಪ್ರಯತ್ನ ಮಾಡಿದ್ದು ನಡಾವಳಿಗಳನ್ನು ಟೀಕಿಸಿರುತ್ತಾರೆ. ಕಟ್ಟಕಡೆಗೆ ವಿಷಯವು ಸರ್ವೋಚ್ಚ ನ್ಯಾಯಾಲಯವನ್ನು ತಲುಪಿದಾಗ, ನಿರ್ದೇಶನಗಳನ್ನು ನೀಡುವುದು, ಅವುಗಳನ್ನು ಗಾಳಿಗೆ ತೂರಲಾಗಲೀ ಅಥವಾ ಮೀರಿ ನಡೆಯಲಾಗಲಿ ಅಥವಾ ಅಲಕ್ಷಿಸಲಾಗಲೀ ಆಗಿರುವುದಿಲ್ಲವೆಂದು ಪುನರುಚ್ಚರಿಸಿ ಅತಿ ಜಾಗರೂಕತೆಯಿಂದ ನಿರ್ದೇಶನಗಳಿಗೆ ಸ್ಪಂದಿಸುವ ದಾರಿ ಮಾತ್ರ ಉಳಿದಿರುತ್ತದೆಂದೂ ***ಲತಾ ಸಿಂಗ್ಸ್*** ಪ್ರಕರಣದಲ್ಲಿ (ಈ ಹಿಂದೆ ಹೇಳಿದ) ಹೇಳಿರುವ ನಿರ್ದೇಶನಗಳನ್ನು ಜಾರಿಗೊಳಿಸಲು ಪೊಲೀಸರು ವಿಫಲರಾಗಿರುತ್ತಾರೆಂಬ ಅಭಿಪ್ರಾಯವನ್ನು ಮಂಡಿಸುತ್ತಾ, ಈ ಮುಂದಿನಂತೆ ಅಭಿಪ್ರಾಯಪಟ್ಟಿರುತ್ತಾರೆ.

> "38. **ಲತಾ ಸಿಂಗ್** ಪ್ರಕರಣದಲ್ಲಿನ ನಿರ್ದೇಶನಗಳ ಹಿನ್ನೆಲೆಯಲ್ಲಿ, ಒಬ್ಬ ವಯಸ್ಕ ಹುಡುಗ ಮತ್ತು ಹುಡುಗಿ ಅಂತರ್ಜಾತಿ ಮತ್ತು ಅಂತರ್ ಧರ್ಮೀಯ ಮದುವೆ ಮಾಡಿಕೊಂಡಲ್ಲಿ, ಅವರ ವೈವಾಹಿಕ ಜೀವನ ತೊಂದರೆಗೀಡಾಗದಂತೆ ಅಥವಾ ಕಿರುಕುಳಕ್ಕೆ ಒಳಗಾಗದಂತೆ ನೋಡಿಕೊಳ್ಳುವುದು ರಾಷ್ಟ್ರದಾದ್ಯಂತ ಆಡಳಿತಾತ್ಮಕ ಕಾರ್ಯಗಳಲ್ಲಿರುವಂಥ ವ್ಯಕ್ತಿಗಳ ಕರ್ತವ್ಯವಾಗಿರುತ್ತದೆ ಮತ್ತು ಅವರುಗಳಿಗೆ ಬೆದರಿಕೆಯೊಡ್ಡುವ ಅಥವಾ ಹಿಂಸೆ ನೀಡುವ ಕೃತ್ಯಗಳನ್ನು ಎಸಗಿದರೆ ಅಂಥ ವ್ಯಕ್ತಿಗಳ ವಿರುದ್ಧ ನಿರ್ದಾಕ್ಷಿಣ್ಯವಾಗಿ ಕಾನೂನಿನ ಮೂಲಕ ಉಪಬಂದಿಸಲಾದಂತೆ ಕ್ರಮ ಕೈಗೊಳ್ಳಬೇಕು."

17. ಪ್ರಸ್ತುತ ಪ್ರಕರಣದಲ್ಲಿ, 23.04.2015ರಂದು, ಎರಡೂ ಕಡೆಯ ಮಾನ್ಯ ವಕೀಲರ ವಾದ–ವಿವಾದಗಳನ್ನು ಆಲಿಸಿದ ತರುವಾಯ ಈ ಮುಂದಿನಂತೆ ಆದೇಶಿಸಲಾಗಿರುತ್ತದೆ:

ಅರ್ಜಿದಾರನು 19.11.2014ರಂದು ಕುಮಾರಿ ಇಂಷಾ ಖಲೀಲಳನ್ನು ಮದುವೆಯಾಗಿರುತ್ತಾನೆ ಮತ್ತು ಪ್ರತ್ಯರ್ಜಿದಾರ ಸಂಖ್ಯೆ 2 ಸಲ್ಲಿಸಿದ ಡಬ್ಲ್ಯೂಪಿಹೆಚ್‌ಸಿ ಸಂಖ್ಯೆ 228/2014ನ್ನು 28.11.2014ರಂದು ವಿಲೆ ಮಾಡಲಾಗಿರುತ್ತದೆಂದು ಮಾನ್ಯ ವಕೀಲರಾದ ಶ್ರೀ ಅರುಣ ಶ್ಯಾಂ ನಿವೇದಿಸಿಕೊಂಡಿರುವುದರಿಂದ, ಆಕೆಯ ಮದುವೆಯನ್ನು ಬಲವಂತವಾಗಿ ಆಕೆಯನ್ನು ಅಪಹರಿಸಿ, ಅಥವಾ ವ್ಯಪಹರಿಸಿ ಅಥವಾ ದುಷ್ಪ್ರೇರಣೆ ನೀಡಿ ಅಂದರೆ, ಭಾರತ ದಂಡ ಸಂಹಿತೆಯ 366ನೇ ಪ್ರಕರಣದ ನಿರೂಪಣೆಯಲ್ಲಿ ಹಾಗೇನಾದರೂ ಮಾಡಲಾಗಿರುವುದೇ ಎಂದು ಕಂಡುಕೊಳ್ಳುವ ಹಿನ್ನೆಲೆಯಲ್ಲಿ, ಅರ್ಜಿದಾರ ಮತ್ತು ಇಂಷಾ ಖಲೀಲ್ ಉರೂಫ್ ಇಂಚರರನ್ನು 28.04.2015ರಂದು ನ್ಯಾಯಾಲಯದ ಎದುರು ಹಾಜರಾಗಲು ನಿರ್ದೇಶಿಸಲಾಗಿರುತ್ತದೆ.

2ನೇ ಪ್ರತ್ಯರ್ಜಿದಾರನನ್ನು ನ್ಯಾಯಾಲಯದ ಎದುರು ಹಾಜರುಪಡಿಸಲು 2ನೇ ಪ್ರತ್ಯರ್ಜಿದಾರನ ಪರ ಮಾನ್ಯ ವಕೀಲ ಶ್ರೀ ಬಿ. ಲೆಥೀಫ್ ಮುಕ್ತರಾಗಿರುತ್ತಾರೆ.

ಈ ಮೊದಲು ಹೊರಡಿಸಿರುವ ಮಧ್ಯಂತರ ಆದೇಶವು ಮುಂದಿನ ಸುನಾವಣಾ ದಿನಾಂಕದ ವರೆಗೆ ಜಾರಿಯಲ್ಲಿರತಕ್ಕದ್ದು.

ಮೇಲಿನ ಆದೇಶವನ್ನು ಅನುಸರಿಸಿ, ಅರ್ಜಿದಾರ ಮತ್ತು ಶ್ರೀಮತಿ ಇಂಚರ ಈ ನ್ಯಾಯಾಲಯದ ಎದುರು ಹಾಜರಾಗಿ, ತಾವೆ ಬೇರೆ ಬೇರೆ ಧರ್ಮದ ಹಿನ್ನೆಲೆಯುವರಾಗಿದ್ದು, ಪ್ರೀತಿಸಿ, 19.11.2014ರಂದು ಮದುವೆ ಮಾಡಿಕೊಂಡಿರುತ್ತೇವೆಂದು ನಿವೇದಿಸಿಕೊಂಡಿರುತ್ತಾರೆ. ಇಂಷಾ ಖಲೀಲ್ ಉರೂಪ್ ಇಂಚರ ತನ್ನನ್ನು 17.11.2014ರಂದು ಅರ್ಜಿದಾರ, ಆತನ ಗೆಳೆಯರು ಅಥವಾ ಸಂಬಂಧಿಕರುಗಳು ನನ್ನನ್ನು ಅಪಹರಿಸಿದ್ದಾಗಲಿ ಅಥವಾ ವ್ಯಪಹರಣ ಮಾಡಿದ್ದಾಗಲಿ ಇಲ್ಲವೇ ಇಲ್ಲ. ತಾನು ಸ್ವ–ಇಚ್ಛೆಯಿಂದಲೇ 17.11.2014ರಂದು ಅರ್ಜಿದಾರನಿಗೆ

ಜೊತೆಯಾದೆ ಹಾಗೂ ತನ್ನ ಸಮ್ಮತಿಯೊಂದಿಗೆ 19.11.2014ರಂದು ತನ್ನ ಮದುವೆಯ ಅನುಷ್ಠಾಪನೆಯಾಯಿತೆಂದೂ ನಿವೇದಿಸಿಕೊಂಡಿರುತ್ತಾಳೆ. ಮುಂದುವರೆದು ಇಬ್ಬರೂ ತಾವು ಶಾಂತಿಯುತ ದಾಂಪತ್ಯ ಜೀವನ ನಡೆಸಲು ಬಯಸುವುದಾಗಿ ನಿವೇದಿಸಿಕೊಂಡಿರುತ್ತಾರೆ.

18. ಇಂಷಾ ಖಲೀಲ್ ಉರೂಫ್ ಇಂಚರ 17.11.2014ರಂದು ಅಂದರೆ ಕಾಲೇಜಿನಿಂದ ಮನೆಗೆ ಹಿಂತಿರುಗದ ದಿನಾಂಕದಂದು ಮತ್ತು 19.11.2014 ಅಂದರೆ ಅರ್ಜಿದಾರನೊಂದಿಗೆ ಆಕೆಯ ವಿವಾಹವು ಅನುಷ್ಠಾಪನೆಗೊಂಡ ಮತ್ತು 1ನೇ ಪ್ರತ್ಯರ್ಜಿದಾರರ ಎದುರು ದೂರನ್ನು ನೀಡಿದ ದಿನಾಂಕದಂದು ವಯಸ್ಕಳಾಗಿದ್ದಳೆಂಬುದರಲ್ಲಿ ಯಾವುದೇ ವಿವಾದ ವಿರುವುದಿಲ್ಲ ಮತ್ತು ಆಕೆ ಪ್ರಾಪ್ತ ವಯಸ್ಕಳಾಗಿದ್ದು, ತಾನು ಯಾರನ್ನಾದರೂ ಮದುವೆಯಾಗಲು ಮುಕ್ತಳಾಗಿರುತ್ತಾಳೆ. ಈ ನ್ಯಾಯಾಲಯದ ಮುಂದೆ ಇಂಷಾ ಖಲೀಲ್ ಉರೂಫ್ ಇಂಚರ, ಯಾವುದೇ ಅಪಹರಣ ಅಥವಾ ವ್ಯಪಹರಣ ಅಥವಾ ದುಷ್ಪ್ರೇರಣೆ ತನಗೆ ಆಗಿರುವುದಿಲ್ಲ ಮತ್ತು ತನ್ನ ಒಪ್ಪಿಗೆಯೊಂದಿಗೆ ತಾನು ಅರ್ಜಿದಾರನನ್ನು ಮದುವೆಯಾಗಿರುತ್ತೇನೆಂದು ನಿವೇದಿಸಿಕೊಂಡಿರುವುದರಿಂದ, ಅರ್ಜಿದಾರನು ಭಾರತ ದಂಡ ಸಂಹಿತೆಯ 366ನೇ ಪ್ರಕರಣದ ವ್ಯಾಪ್ತಿಯಲ್ಲಿ ಬರುವ ಯಾವುದೇ ಅಪರಾಧವನ್ನು ಎಸಗಿರುವುದಿಲ್ಲವೆಂಬುದು ನನಗೆ ಮನವರಿಕೆಯಾಗಿರುತ್ತದೆ. ಹರಿಯಾಣ ಸರ್ಕಾರ ವಿರುದ್ಧ ಬಜನ್‌ಲಾಲ್ ((1992) (1) ಎಸ್‌ಸಿಸಿ 335)ಎಂಬ ನಿರ್ಣಾಯಕ ಪ್ರಕರಣದಲ್ಲಿ 102ನೇ ಪ್ಯಾರಾದ ಕ್ರಮಸಂಖ್ಯೆ (1) (2) (3) ಮತ್ತು (5)ರಲ್ಲಿ ಸರ್ವೋಚ್ಚ ನ್ಯಾಯಾಲಯವು ನೀಡಿದ ಪ್ರಕರಣಗಳ ಪ್ರವರ್ಗಗಳೊಂದಿಗೆ ಪ್ರಶ್ನಿತ ಪ್ರಥಮ ಮಾಹಿತಿ ವರದಿಯು ಬರುತ್ತದೆ.

19. ಅಪರಾಧ ಸಂಖ್ಯೆ: 342/2014ರಲ್ಲಿ ನೋಂದಾಯಿಸಿದ ಪ್ರಕರಣ ಮತ್ತು IIIನೇ ಜೆಎಂಎಫ್‌ಸಿ, ದ.ಕ. ಮಂಗಳೂರು ನಗರ ಇದಕ್ಕೆ ಸಲ್ಲಿಸಿದ ಪ್ರಥಮ ಮಾಹಿತಿ ವರದಿಯಲ್ಲಿ 2ನೇ ಪ್ರತ್ಯರ್ಜಿದಾರರ ಸಂದರ್ಭದಲ್ಲಿ ಮೊದಲ ಪ್ರತ್ಯರ್ಜಿದಾರರು ನಡಾವಳಿಯನ್ನು ದುರುಪಯೋಗಪಡಿಸಿಕೊಂಡಿದ್ದು, ಲತಾ ಸಿಂಗ್ (ಹಿಂದೆ ಹೇಳಿದ)

ಪ್ರಕರಣದಲ್ಲಿ, ಕಾನೂನು ವಿಧಿಸಿರುವುದಕ್ಕೆ ವಿರುದ್ಧವಾಗಿದ್ದು, ಇದು ಸಂಪೂರ್ಣವಾಗಿ ರದ್ದುಪಡಿಸಲು ಬದ್ಧವಾಗಿರುತ್ತದೆ.

ಪರಿಣಾಮವಾಗಿ, ಅರ್ಜಿಯನ್ನು ಅಂಗೀಕರಿಸಿ, IIIನೇ ಜೆಎಂಎಫ್‌ಸಿ, ದಕ್ಷಿಣ ಕನ್ನಡ ಮಂಗಳೂರು ನಗರ ಇವರಿಗೆ 1ನೇ ಪ್ರತ್ಯರ್ಜಿದಾರರು ಸಲ್ಲಿಸಿದ ಅಪರಾಧ ಸಂಖ್ಯೆ 342/2014ರಲ್ಲಿನ ಪ್ರಥಮ ಮಾಹಿತಿ ವರದಿಯನ್ನು ರದ್ದುಪಡಿಸಲಾಗಿರುತ್ತದೆ. **ಲತಾ ಸಿಂಗ್ ಮತ್ತು ಅಶೋಕ್ ಕುಮಾರ್ ತೋಡಿ** (ಮೇಲೆ ಹೇಳಿದ) ತೀರ್ಪುಗಳನ್ನು ಗಮನದಲ್ಲಿಟ್ಟುಕೊಂಡು, ಅರ್ಜಿದಾರನಿಗಾಗಲೀ ಅಥವಾ ಆತನ ಪತ್ನಿಗಾಗಲೀ ಕಿರುಕುಳ ಅಥವಾ ಬೆದರಿಕೆ ಅಥವಾ ಅವರ ವಿರುದ್ಧ ಹಿಂಸೆ ನಡೆಸುವ ಕೃತ್ಯಗಳನ್ನು ಎಸಗಲು ಬಿಡುವುದಿಲ್ಲವೆಂದು ಖಚಿತಪಡಿಸಬೇಕೆಂದು ನಿರ್ದೇಶಿಸಲಾಗಿರುತ್ತದೆ. ಯಾರಾದರೂ ಹಾಗೆ ಮಾಡುವುದು ಕಂಡು ಬಂದಲ್ಲಿ, ಅಂಥ ವ್ಯಕ್ತಿ/ಗಳ ವಿರುದ್ಧ ಕಾನೂನು ಜಾರಿಗೊಳಿಸುವ ಅಧಿಕಾರಿಗಳಿಂದ ಕಾನೂನಿಗನುಸಾರವಾಗಿ ಕ್ರಮ ಕೈಗೊಳ್ಳಬೇಕಾಗಿರುತ್ತದೆ.

ತದನುಸಾರವಾಗಿ ಆದೇಶಿಸಲಾಗಿರುತ್ತದೆ.